ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ**
**ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು- 560 023.**

ಸಂಖ್ಯೆ: HFW/NHM/e-H/AEBAS/55/2017-18 (e-Office No. 655243) ದಿನಾಂಕ: 29.11.2022

# ಸುತ್ತೋಲೆ

**ವಿಷಯ:** AEBAS ಹಾಜರಾತಿಯನ್ನು ಪರಿಗಣಿಸಿ ಅಧಿಕಾರಿ/ ಸಿಬ್ಬಂದಿಗಳ ವೇತನ ಪಾವತಿಸುವ ಕುರಿತು.

**ಉಲ್ಲೇಖ:**
1. ಆಯುಕ್ತರು ಆ.ಕು.ಕ ಸೇವೆಗಳು ಇವರ ಸುತ್ತೋಲೆ ಸಂಖ್ಯೆ HFW/NHM/e-H/AEBAS/55/2017-18, ದಿನಾಂಕ 18-04-2022
2. ಮಾನ್ಯ ಮುಖ್ಯಮಂತ್ರಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ 08-05-2022 ಮತ್ತು 09-05-2022 ರಂದು ನಡೆದ ಎಲ್ಲಾ ಜಿಲ್ಲಾಧಿಕಾರಿ ಮತ್ತು ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯ ನಡವಳಿ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು Aadhaar Enabled Biometric Attendence System (AEBAS) ನಲ್ಲಿ ಕಡ್ಡಾಯವಾಗಿ ಹಾಜರಾತಿ ದಾಖಲಿಸುವಂತೆ ಸೂಚಿಸಲಾಗಿತ್ತು ಹಾಗೂ ಉಲ್ಲೇಖ (2) ರನ್ವಯ ಮಾನ್ಯ ಮುಖ್ಯಮಂತ್ರಿ ರವರು ಬಯೋಮೆಟ್ರಿಕ್ ಮಾಡದೇ ಇರುವವರಿಗೆ DDO ಗಳು ಸಂಬಳವನ್ನು ಬಿಡುಗಡೆ ಮಾಡುವಂತಿಲ್ಲವೆಂದು ಸೂಚಿಸಿರುತ್ತಾರೆ.

ಈ ನಿಟ್ಟಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಆಸ್ಪತ್ರೆಗಳ/ಸಂಸ್ಥೆಗಳ, ಕಛೇರಿಗಳ ಹಾಗೂ ತರಬೇತಿ ಕೇಂದ್ರಗಳ ಅಧಿಕಾರಿಗಳು/ಸಿಬ್ಬಂದಿಗಳು (ಗುತ್ತಿಗೆ, ಹೊರಗುತ್ತಿಗೆ, ಒಂದು ವರ್ಷ ಕಡ್ಡಾಯ ಸೇವೆಯ ವೈದ್ಯರುಗಳು) ಕಡ್ಡಾಯವಾಗಿ AEBAS ನಲ್ಲಿ ಹಾಜರಾತಿಯನ್ನು ದಾಖಲಿಸಲು ಮತ್ತೊಮ್ಮೆ ಅಂತಿಮವಾಗಿ ಸೂಚಿಸಿದೆ. ಆಯಾ ಆಸ್ಪತ್ರೆಗಳ/ಸಂಸ್ಥೆಗಳ/ಕೇಂದ್ರಗಳ ವೇತನ ಸೆಳೆಯುವ ಅಧಿಕಾರಿಗಳು (DDO) ಪ್ರತೀ ಮಾಹೆಯ ವೇತನ ಪಾವತಿಸುವ ಮುನ್ನ AEBAS ಹಾಜರಾತಿಯನ್ನು ಪರಿಶೀಲಿಸಿ, ಅದರನುಸಾರ ವೇತನ ನೀಡತಕ್ಕದ್ದು, ಆಯಾ ಸಂಸ್ಥೆಗಳ DDO ರವರು AEBAS ನಲ್ಲಿ ಹಾಜರಾತಿ ದಾಖಲಿಸದ ಸಿಬ್ಬಂದಿಗಳಿಂದ ಹಾಜರಾತಿ ದಾಖಲಿಸದಿರಲು ಕಾರಣ/ವಿವರಗಳನ್ನು ಪಡೆದು ಸಂಬಂಧಪಟ್ಟ ಅಧಿಕಾರಿಗಳ ಮುಖಾಂತರ ಆಯಾ ಜಿಲ್ಲೆಗಳ ಆಕುಕ ಅಧಿಕಾರಿಗಳಿಗೆ ಸಲ್ಲಿಸಬೇಕು, ಹಾಗೂ ಜಿಲ್ಲೆಗಳ ಆಕುಕ ಅಧಿಕಾರಿಗಳು ಸದರಿ ಪ್ರಕರಣಗಳನ್ನು ಪರಿಶೀಲಿಸಿ, ಸಿಬ್ಬಂದಿಗಳು ನೀಡಿದ ಕಾರಣಗಳು ಸೂಕ್ತವೆನಿಸಿದಲ್ಲಿ ಮಾತ್ರ ವೇತನ ಬಿಡುಗಡೆಗೊಳಿಸಲು ಸೂಚಿಸಬಹುದು.

29.11.22

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**
**ಬೆಂಗಳೂರು- 560 023.**

**ಪ್ರತಿಯನ್ನು ಕ್ರಮಕ್ಕಾಗಿ:**
1. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

3. ನಿರ್ದೇಶಕರು, ಎಸ್.ಐ.ಹೆಚ್.ಎಫ್.ಡಬ್ಲ್ಯೂ, ಮಾಗಡಿ ರಸ್ತೆ, ಬೆಂಗಳೂರು.
4. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
5. ಮುಖ್ಯ ಆಡಳಿತಾಧಿಕಾರಿಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
6. ಮುಖ್ಯ ಲೆಕ್ಕ ಪತ್ರಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
7. ಮುಖ್ಯ ಆರ್ಥಿಕಾಧಿಕಾರಿಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
8. ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರುಗಳು
9. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು.
10. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ರವರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಯನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.